







# ತಿರುವು ದಾರಿಯಲ್ಲಿ ಹೊರಳು ನೋಟ

ಹೊಸ ಕಥೆಯನ್ನು ಹೇಳಬೇಕು ಎಂಬುದು ಎಲ್ಲ ಸಿನಿಕರ್ಮಿಗಳ ತುಡಿತವಂತೂ ಹೌದು. ಆದರೆ ನಾವು ಈಗಾಗಲೇ ಎಷ್ಟು ಕಥೆಗಳನ್ನು ಕೇಳಿಯಾಗಿದೆ ಎಂದರೆ ಪೂರ್ತಿ ಹೊಸದೇ ಆದ ಕಥೆಯೊಂದನ್ನು ಹೇಳುವುದು ಅಸಾಧ್ಯವೋ ಎನ್ನುವ ಮಟ್ಟಿಗೆ. ಆದರೆ ಎಷ್ಟೇ ಹಳೆಯ ಕಥೆಯಾದರೂ ಅದು ಭಿನ್ನ ಅನುಭವಗಳಿಂದ ಹೊಸದಾಗಿ ಕಾಣಿಸಬಲ್ಲದು. ಅನುಭವವಷ್ಟೇ ಅಲ್ಲ, ಅದನ್ನು ಹೇಳುವ ಕ್ರಮದಿಂದಲೂ ಹೊಸ ರೀತಿಯಲ್ಲಿ ಕಾಣುವಂತೆ ಮಾಡಬಹುದು. ಹಾಗೆಯೇ ಹೇಳುವ ಕ್ರಮದಿಂದಲೂ ಅದೊಂದು ಹೊಸ ಕಥೆ ಎಂಬ ಭಾವವನ್ನು ನಮ್ಮ ಮನಸಲ್ಲಿ ಹುಟ್ಟಿಸುತ್ತದೆ. ಹಾಗೆಂದು ಹೊಸ ರೀತಿಯಲ್ಲಿ ಹೇಳಿದ ಕಥೆಗಳೆಲ್ಲವೂ ಹೊಸದಾಗೇ ಕಾಣಿಸುತ್ತವೆ ಮತ್ತು ಯಶಸ್ವಿಯಾಗುತ್ತವೆ ಎಂದೇನೂ ಇಲ್ಲ.

ಇಮ್ತಿಯಾಜ್ ಅಲಿ ನಿರ್ದೇಶನದ 'ದ ಅದರ್ ವೇ' ಎಂಬ ಕಿರುಚಿತ್ರ ಗಮನಸೆಳೆಯುವುದೂ ಇದೇ ರೀತಿಯಲ್ಲಿ. ಮತ್ತೊಂದು ದಾರಿ ಎಂಬ ಮಾತು ಈ ಕಿರುಚಿತ್ರದ ನಾಯಕಿಯ ಚಲನೆಯನ್ನು ಎಷ್ಟರಮಟ್ಟಿಗೆ ಪ್ರತಿನಿಧಿಸುತ್ತದೆಯೋ, ಒಟ್ಟಾರೆ ಕಿರುಚಿತ್ರದ ನಿರೂಪಣೆಯನ್ನೂ ಅಷ್ಟೇ ಸಶಕ್ತವಾಗಿ ಪ್ರತಿನಿಧಿಸುತ್ತದೆ. ನಿರ್ದೇಶಕರು ಇಲ್ಲಿ ಹಿಡಿದಿರುವ ದಾರಿ ಬೇರೆಯೇ ಆಗಿದೆ. ಹಾಗಾಗಿಯೇ ಈ ಕಥೆ ಬೇರೆಯದೇ ಆಗಿ ಕಾಣಿಸುತ್ತಿದೆ.

ಒಂದು ಪ್ರೇಮಕಥೆ ಎಂದಿಟ್ಟುಕೊಳ್ಳಿ. ಬಹುತೇಕ ಪ್ರೇಮಕಥೆಗಳು ಹೇಗೆ ನಡೆಯುತ್ತವೆ? ಹುಡುಗ – ಹುಡುಗಿ ಪರಿಚಯವಾಗುತ್ತಾರೆ. ಪರಿಚಯ ಸ್ನೇಹಕ್ಕೆ ತಿರುಗಿಕೊಳ್ಳುತ್ತದೆ. ಪ್ರೇಮವಾಗುತ್ತದೆ. ಒಂದೊಮ್ಮೆ ಆ ಪ್ರೇಮಕಥೆ ಭಗ್ನಪ್ರೇಮದ ಕಥೆಯಾಗಿದ್ದರೆ, ಕೊನೆಯಲ್ಲಿ ಹುಡುಗಿಗೆ ಅಥವಾ ಹುಡುಗನಿಗೆ ಬೇರೆಯವರ ಜೊತೆ ಮದುವೆಯಾಗುತ್ತದೆ.

ಆದರೆ ಈ ಕಿರುಚಿತ್ರದಲ್ಲಿ ಹಾಗಲ್ಲ. ಹುಡುಗಿಯ ಮದುವೆಯ ದೃಶ್ಯವೇ ನಿಮಗೆ ಮೊದಲು ಎದುರಾಗುವುದು. ಅಲ್ಲಿ ಬರುವ ಒಬ್ಬ ಫೋಟೊಗ್ರಾಫರ್ ತೆಗೆಯುವ ಫೋಟೊದ ಮೂಲಕ ಕಥೆ ಹಿಂದಕ್ಕೆ ಚಲಿಸಲಾರಂಭಿಸುತ್ತದೆ. ಈ ಹಿಮ್ಮುಖ ಚಲನೆಗೆ ಪ್ರೇಕ್ಷಕನ ಮನೋವೇದಿಕೆ ಸಜ್ಜುಗೊಳಿಸಲಿಕ್ಕೆಂಬಂತೆ ನಿರ್ದೇಶಕರು ಒಂದು ಹಳೆಯ ಗಡಿಯಾರದ ಕುರಿತ ಮಾತಿನೊಟ್ಟಿಗೆ ಚಿತ್ರ ಆರಂಭಿಸುತ್ತಾರೆ. ಕಾಲದ ಹಿಮ್ಮುಖ ಚಲನೆಯ ಮೂಲಕವೇ ಕಥೆ ಉಲ್ಟಾ ಆಗಿ ತೆರೆದುಕೊಳ್ಳುತ್ತ ಹೋಗಿ ಚಿತ್ರದ ಕೊನೆಯಲ್ಲಿ ಹುಡುಗ, ಹುಡುಗಿ ಪರಿಚಯವಾಗುವಲ್ಲಿಗೆ ಕೊನೆಯಾಗುತ್ತದೆ. ಅಂದರೆ ಒಂದು ಕಥೆಯನ್ನು ಪೂರ್ತಿಯಾಗಿ ಉಲ್ಟಾ ಮಾಡಿ ಇಟ್ಟ ಹಾಗೆ!

ನಿರೂಪಣೆಯ ಈ ತಂತ್ರದ ಆಚೆಗೂ ಈ ಕಿರುಚಿತ್ರದಲ್ಲಿ ಗಮನಸೆಳೆಯುವ, ಹೊಸತು ಅನಿಸುವ ಹಲವು ಅಂಶಗಳಿವೆ. ಮದುವೆ ನಿಶ್ಚಯವಾಗಿರುವ, ಅಂದೇ ಮದುವೆ ಆಗಲಿರುವ ಹುಡುಗಿಯೊಬ್ಬಳು ತನ್ನ ಮದುವೆಗೆ ಫೋಟೊ ತೆಗೆಯಲು ಬರುವ ಹುಡುಗನೊಟ್ಟಿಗೆ ಕೊಂಚ ಕಾಲದ ಮಟ್ಟಿಗೆ ಓಡಿಹೋಗುವುದೇ ವಿಶಿಷ್ಟವಾದ ಕಥೆಯಲ್ಲವೇ? ಅವಳಿಗೆ ಆ ಹುಡುಗನೊಟ್ಟಿಗೆ ಮದುವೆ ಇಷ್ಟವಿಲ್ಲ ಎಂದೇನೂ ಇಲ್ಲ. ಅವನೇ ಅವಳ ಬಾಯ್‌ಫ್ರೆಂಡ್. ಆದರೆ ಮದುವೆಯಾದ ಮೇಲೆ ತಾನು ನಿರ್ವಹಿಸಬೇಕಾದ ಹೆಂಡತಿಯ ಪಾತ್ರದ ಬಗ್ಗೆ ಅವಳಿಗೆ ಹಿಂಜರಿಕೆ ಇದೆ. ಅದು ಕಿತ್ತುಕೊಳ್ಳುವ ತನ್ನ ಸ್ವಾತಂತ್ರ್ಯದ ಬಗ್ಗೆ ಆತಂಕವಿದೆ. ಅದನ್ನು ನಿವಾರಿಸಿಕೊಳ್ಳಲಿಕ್ಕೇ ಎಂಬಂತೆ ಆಗಷ್ಟೇ ಪರಿಚಯವಾದ ಫೋಟೊಗ್ರಾಫರ್ ಜೊತೆಗೆ ಕೆಲಕಾಲ ಹೊರಗಡೆ ಓಡಾಡಿಕೊಂಡು ಬರುತ್ತಾಳೆ. ಈ ಓಡಾಟ ಅವಳಲ್ಲಿ ಮತ್ತೆ ಜೀವಂತಿಕೆ ತುಂಬುತ್ತದೆ. ಸಾಂಪ್ರದಾಯಿಕ ಕಣ್ಣಿಗೆ 'ಅನೈತಿಕ' ಎಂದು ಕಾಣಬಹುದಾದ ಈ ಘಟನೆಯಲ್ಲಿಯೂ ಇರುವ ಜೀವಂತಿಕೆಯ ಸೆಲೆಯನ್ನು ಕಾಣಿಸಿರುವುದೇ ಈ ಕಿರುಚಿತ್ರದ ಹೆಚ್ಚುಗಾರಿಕೆ. ನಿರೂಪಣೆಯ ತಂತ್ರದ ಕುರಿತು ಅತಿಯಾಗಿ ತಲೆಕೆಡಿಸಿಕೊಳ್ಳುವ ಬದಲಿಗೆ ಮನುಷ್ಯ ಸಂಬಂಧಗಳ ಸಂಕೀರ್ಣತೆಯನ್ನು ಕಾಣಿಸುವಲ್ಲಿಯೇ ಹೆಚ್ಚು ಗಮನಹರಿಸಿದ್ದರೆ ಇದು ಇನ್ನಷ್ಟು ಸೂಕ್ಷ್ಮ ಸಿನಿಮಾ ಆಗಬಹುದಿತ್ತು ಎಂಬ ಸಣ್ಣ ಆಸೆಯ ಆಚೆಗೂ ಇದು ಗಮನಸೆಳೆಯುತ್ತದೆ. ■

ಹೆಸರು: ದ ಅನದರ್ ವೇ (ಹಿಂದಿ)
ನಿರ್ದೇಶನ: ಇಮ್ತಿಯಾಜ್ ಅಲಿ
ನಿರ್ಮಾಣ: ರಾಜೇಶ್ ಶರ್ಮ
ಛಾಯಾಗ್ರಹಣ: ರಾಜೇಶ್ ಶುಕ್ಲ
ಸಂಗೀತ: ಪೀಯೂಶ್ ಕಾನೋಜಿಯಾ
ಸಂಕಲನ: ಮನೀಶ್ ಜೆಟ್ಲಿ
ತಾರಾಗಣ: ಶ್ರೇಯಾ ಚೌಧರಿ, ಪವ್ಯೆಲ್ ಗುಲಾಟಿ

■ ಗೌರಿ

ಕಿರುಚಿತ್ರ ವೀಕ್ಷಣೆಗೆ https://bit.ly/3vQqsT4 ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.